**O.S. 473-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 22.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ G V M, ವಕೀಲರಿಂದಃ**

2. ನನ್ನ ಗಂಡನ ತಂದೆ ಹೆಸರು ದ್ಯಾಮಪ್ಪ. ದ್ಯಾಮಪ್ಪನಿಗೆ 3 ಜನ ಗಂಡು ಮಕ್ಕಳು. 1) ಕಲ್ಲಪ್ಪ 2) ಸಂಗಪ್ಪ 3) ಬಸಪ್ಪ. ನನ್ನ ಗಂಡನ ಆಸ್ತಿಯಲ್ಲಿ ಪಾಲು ಬೇಡಿ ದಾವೆ ಸಲ್ಲಿಸಿದ್ದೇನೆ. ದಾವೆಯಲ್ಲಿ ಎರಡು ಮನೆಗಳು ಹಾಗೂ ಎರಡು ಹೊಲಗಳಿವೆ. ದಾವಾ ಎ-ಶೆಡ್ಯೂಲ್ ದಲ್ಲಿರುವ 3 ಹಾಗೂ 4 ಮನೆಗಳು ನಮ್ಮ ಮಾವ ದ್ಯಾಮಪ್ಪ ರವರ ಹೆಸರಿನಲ್ಲಿವೆ ಅಂದರೆ ಗೊತ್ತಿಲ್ಲ. ನಿಪಿ.7 ಹಾಗೂ 8 ರ ಪ್ರಕಾರ ದ್ಯಾಮಪ್ಪ ರವರ ಹೆಸರಿನಲ್ಲಿವೆ ಅಂದರೆ ಸರಿಯಲ್ಲ. ಕಲ್ಲಪ್ಪ ಹಾಗೂ ಬಸಪ್ಪ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ.

3. ನನ್ನ ಮಗ ಮರಣ ಹೊಂದಿ ಒಂದೂವರೆ ವರ್ಷ ವಾಯಿತು. 25 ವರ್ಷಗಳಿಂದ ನಾನು ಮಗಳ ಜೊತೆಯಲ್ಲಿದ್ದೇನೆ. ಬಸಪ್ಪ ಮರಣ ಹೊಂದಿದಾಗ ಶವ ಸಂಸ್ಕಾರಕ್ಕೆ ಹೋಗಿದ್ದೆನು. ಪ್ರತಿವಾದಿ 1 ರಿಂದ 4 ರವರು ದಾವಾ ಆಸ್ತಿ ಕ್ರಮ ಸಂಖ್ಯೆ 4 ರಲ್ಲಿ ಮನೆ ಕಟ್ಟಿಕೊಂಡು ಇದ್ದಾರೆ ಅಂದರೆ ಸರಿ. ಕ್ರಮ ಸಂಖ್ಯೆ 3 ರಲ್ಲಿ ಕಲ್ಲಪ್ಪ ರವರ ವಾರಸುದಾರರಿದ್ದಾರೆ ಅಂದರೆ ಸರಿ. ಅದು ಪಡಾ ಜಗಾ ಇದೆ. ಕಲ್ಲಪ್ಪ ರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

4. ನನ್ನ ಮಗಳು ಸಿವಿಲ್ ನ್ಯಾಯಾಲಯ, ಹುಬ್ಬಳ್ಳಿ ಅಸಲು ದಾವೆ ನಂಃ 145/23 ದಾವೆ ಸಲ್ಲಿಸಿದ್ದಾಳೆ ಅಂದರೆ ಸರಿ. ಸದರಿ ದಾವೆಯನ್ನು ಪ್ರತಿವಾದಿ 1 ಹಾಗೂ 4 ರವರ ವಿರುದ್ಧ ಸಲ್ಲಿಸಿದ್ದಾರೆ ಅಂದರೆ ಸರಿ. ಪ್ರತಿವಾದಿ 1 ರಿಂದ 4 ರವರು ಇರುವ ಮನೆಯಲ್ಲಿ ಮನೆ ಕಟ್ಟಿದ್ದರೂ ಸಹ ನನ್ನ ಮಗಳು ದಾವೆ ಸಲ್ಲಿಸಿದ್ದಾಳೆ ಅಂದರೆ ಸರಿ.

5. ಬಸಪ್ಪ ಮರಣ ಹೊಂದಿದ ನಂತರ ಆತನ ಹೆಂಡತಿ ಹಾಗೂ ಮಕ್ಕಳು ಹೆಸರು ದಾಖಲೆಯಲ್ಲಿ ಹಚ್ಚಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ನನ್ನನ್ನು ಆ ಕಾಲಕ್ಕೆ ಕರೆದರು ಅಂದರೆ ಸರಿಯಲ್ಲ. ನಾನು ಹೋದ ಕಾರಣ ಅವರು ಹೆಂಡತಿ-ಮಕ್ಕಳೆಂದು ವಾರಸುದಾರರೆಂದು ಹೆಸರು ಹಚ್ಚಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ಆ ಕಾರಣದಿಂದ ದಾವಾ ಆಸ್ತಿ ಕ್ರಮಸಂಖ್ಯೆ 1 ಪ್ರತಿವಾದಿ-1 ರಿಂದ 4 ರವರ ಹೆಸರಿನಲ್ಲಿವೆ ಅಂದರೆ ಗೊತ್ತಿಲ್ಲ.

**O.S. 473-24 PW : 1**

ಪ್ರತಿವಾದಿ 1 ರಿಂದ 4 ರವರು ನನಗೆ ಹಾಗೂ ನನ್ನ ಮಗಳಿಗೆ ತಲಾ 5 ಲಕ್ಷ ರೂ. ಹಣ ಕೊಟ್ಟು ಹಕ್ಕು ಬಿಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ನಾವು ಹಿರಿಯರ ಬಳಿ ಪಂಚಾಯತಿ ಮಾಡಿದ್ದೆವು. ಪಂಚಾಯತಿಯಲ್ಲಿ ಪ್ರ,ತಿವಾದಿ 1 ರಿಂದ 4 ರವರು ನಮಗೆ ತಲಾ 5 ಲಕ್ಷ ರೂ. ಹಣ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಸ ನಂಃ 442/1, 8 ಎಕರೆ ಜಮೀನನ್ನು ಬಸಪ್ಪ ಸ್ವಂತ ಖರೀದಿ ಮಾಡಿದ್ದಾನೆ ಅಂದರೆ ನನ್ನ ಗಂಡನ ಆಸ್ತಿ ಮಾರಾಟ ಮಾಡಿ ಖರೀದಿ ಮಾಡಿದ್ದಾನೆ ಎಂದು ಹೇಳುತ್ತಾಳೆ. ಬಸಪ್ಪನಿಗೆ ಆ ಕಾಲಕ್ಕೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಅಂದರೆ ಸರಿಯಲ್ಲ. ಯಾವ ಸರ್ವೆ ನಂಬರ ಜಮೀನು ಇತ್ತು ಎಂದು ಹೇಳಲಾಗುವುದಿಲ್ಲ. ಕ್ರಮ ಸಂಖ್ಯೆಃ 2 ನ್ನು ಮನೆ ಕಟ್ಟಲು ಪ್ರತಿವಾದಿ 1 ರಿಂದ 4 ರವರು 6 ನೇ ಪ್ರತಿವಾದಿಗೆ ಮಾರಾಟ ಮಾಡಿದರು ಅಂದರೆ ಗೊತ್ತಿಲ್ಲ. ಆ ಕಾಲಕ್ಕೆಪ್ರತಿವಾದಿ 1 ರಿಂದ 4 ರವರು ನನಗೆ ಹಾಗೂ ನನ್ನ ಮಗಳಿಗೆ ಹಣ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.